

# ಬೆಡಗಿನ ಎಡಮುರಿ!

**ಎಡಮುರಿ ತಾಣದಲ್ಲಿ ಹಾಗೂ ಆಸುಪಾಸಿನ ಪರಿಸರದಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳಂ ಸಿನಿಮಾಗಳ ಚಿತ್ರೀಕರಣ ಆಗಾಗ್ಗೆ ನಡೆಯುತ್ತದೆ. ಹಿಂದಿ ಮತ್ತು ಇಂಗ್ಲಿಷ್ ಸಿನಿಮಾಗಳೂ ಇಲ್ಲಿ ಚಿತ್ರೀಕರಣಗೊಂಡಿವೆ.**

■ ಚಿತ್ರ– ಲೇಖನ: **ಗಣಂಗೂರು ನಂಜೇಗೌಡ**

ಮೈಸೂರು ಆಸುಪಾಸಿನ ಪ್ರಕೃತಿ ತಾಣ ಬಲಮುರಿಗೆ ಕೆಲವೇ ಕಿ.ಮೀ. ದೂರದಲ್ಲಿರುವ ಎಡಮುರಿ ಫಾಲ್ಸ್ ಹೆಚ್ಚು ವೈಶಿಷ್ಟ್ಯದಿಂದ ಕೂಡಿದೆ. ಮುನ್ನೂರು ವರ್ಷಗಳ ಹಿಂದೆ ಕಾವೇರಿ ನದಿಗೆ ನಿರ್ಮಿಸಿರುವ ಒಡ್ಡಿನಿಂದ ಸೃಷ್ಟಿಯಾಗಿರುವ ಕಾವೇರಿ ನದಿಯ ನೀರಿನ ವಿಶಾಲ ಹರವು, ಲಾಳಾಕಾರದ ಒಡ್ಡಿನಿಂದ ಹಾಲ್ನೊರೆಯಂತೆ ಧುಮ್ಮಿಕ್ಕುವ ಜಲಧಾರೆ ಇದು.

ಒಡ್ಡಿನ ಹಿಂದೆ ಕಣ್ಣಳತೆಯ ದೂರಕ್ಕೂ ಕಾಣುವ ಹಸಿರು ಪರಿಸರ, ಅತ್ತಿಂದಿತ್ತ ಹಾರಾಡುವ, ನೀರಿನಲ್ಲಿ ಮುಳುಗೇಳುವ ಪಕ್ಷಿಗಳು, ಆ ಪಕ್ಷಿಗಳ ಕೊರಳಿಂದ ಹೊಮ್ಮುವ ಇಂಚರ ಸವಿಯಲು ಒಮ್ಮೆ ಎಡಮುರಿಗೆ ಬರಬೇಕು.

ಎಡಮುರಿ ತಾಣಕ್ಕೆ ಭಾನುವಾರ ಮತ್ತು ಸರ್ಕಾರಿ ರಜೆ ದಿನಗಳಲ್ಲಿ ವಿಹಾರಿಗಳು ಧಾವಿಸುತ್ತಾರೆ. ಬೆಂಗಳೂರು, ಮೈಸೂರು ಮಾತ್ರವಲ್ಲದೆ ಕೇರಳ ಇತರ ಹೊರ ರಾಜ್ಯಗಳಿಂದಲೂ ಇಲ್ಲಿಗೆ ಪ್ರವಾಸಿಗರು ತಂಡ ತಂಡವಾಗಿ ಬರುತ್ತಾರೆ. ಹಾಗೆ ಬಂದವರು ನೀರಿಗೆ ಇಳಿದು ಗಂಟೆಗಟ್ಟಲೆ ನೀರಾಟ ಆಡುತ್ತಾರೆ. ಕೆಲವರು ಒಡ್ಡಿನ ಮೇಲೆ ನಡೆದಾಡಿ ಖುಷಿ ಅನುಭವಿಸಿದರೆ, ಮತ್ತೆ ಕೆಲವರು ಈಜುತ್ತಾ ಮೋಜು ಮಾಡುತ್ತಾರೆ. ಒಡ್ಡಿನ ಕೆಳಭಾಗದಲ್ಲಿ ಪರಸ್ಪರ ನೀರೆರಚಾಟದ ದೃಶ್ಯಗಳು ಸಾಮಾನ್ಯ.

ಎಡಮುರಿ ನಿರ್ಮಾಣ: ಇದು ತನ್ನಿಂದ ತಾನೆ ಸೃಷ್ಟಿಯಾದ ತಾಣವಲ್ಲ. ಜನಪರ ಕಾಳಜಿ ಹೊಂದಿದ್ದ ಯದು ವಂಶದ ಮೈಸೂರು ಒಡೆಯರ್ ದೊರೆಗಳು ರೈತರ ಕೃಷಿ ಭೂಮಿಗೆ ನೀರುಣಿಸಲು ಕಾವೇರಿ ನದಿಗೆ ನಿರ್ಮಿಸಿದ ಹಲವು ಒಡ್ಡುಗಳಲ್ಲಿ ಎಡಮುರಿಯೂ ಒಂದು. ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಆಳಿದ, ಒಡೆಯರ್ ವಂಶದ ಪ್ರಸಿದ್ಧ ದೊರೆ ಚಿಕ್ಕದೇವರಾಜ ಒಡೆಯರ್ (1673–1704) 17ನೇ ಶತಮಾನದ ಉತ್ತರಾರ್ಧದಲ್ಲಿ ಕಾವೇರಿ ನದಿಗೆ ಇಲ್ಲಿ ಒಡ್ಡು ನಿರ್ಮಿಸಿದ್ದಾರೆ. ಸೇಥಿ ಕಟ್ಟೆ ಎಂದು ಕರೆಯಲ್ಪಡುವ ಈ ಒಡ್ಡಿನ ಒಟ್ಟು ಉದ್ದ 470 (1541 ಅಡಿಗಳು) ಮೀಟರ್.

ಈ ಅಣೆಯಿಂದ ಎಡಕ್ಕೆ ಚಿಕ್ಕದೇವರಾಯ ಸಾಗರ ನಾಲೆ (ನೀರು ಹರಿಯುವ ಸಾಮರ್ಥ್ಯ 900 ಕ್ಯೂಸೆಕ್) ಮತ್ತು ಬಲಕ್ಕೆ ದೇವರಾಯ ನಾಲೆ (ನೀರು ಹರಿಯುವ ಸಾಮರ್ಥ್ಯ 244 ಕ್ಯೂಸೆಕ್) ಹರಿಯುವಂತೆ ಮಾಡಿದ್ದಾರೆ. ಕಲ್ಲು ಮತ್ತು ಚುರಕಿ ಗಾರೆಯನ್ನು ಬಳಸಿ ಎಡಮುರಿ ಒಡ್ಡು ನಿರ್ಮಿಸಲಾಗಿದೆ. 300 ವರ್ಷಗಳ ಹಿಂದೆ ನಿರ್ಮಿಸಿರುವ ಈ ಅಣೆಯಿಂದ ಸುಮಾರು 20ರಿಮದ 25 ಅಡಿ ಕೆಳಕ್ಕೆ ನೀರು ಧುಮುಕುವುದರಿಂದ ಇದು 'ಎಡಮುರಿ ಫಾಲ್ಸ್' ಎಂದೇ ಜನಜನಿತವಾಗಿದೆ. ಕೆಆರ್‌ಎಸ್ ಜಲಾಶಯದ ತಗ್ಗಿನಲ್ಲಿರುವ ಈ ತಾಣ ಪ್ರಸಿದ್ಧ ರಂಗನತಿಟ್ಟು ಪಕ್ಷಿಧಾಮದ ಮೇಲ್ಮುಖದಲ್ಲಿದೆ.

ಸಿನಿಮಾ ಚಿತ್ರೀಕರಣ: ಎಡಮುರಿ ತಾಣದಲ್ಲಿ ಹಾಗೂ ಆಸುಪಾಸಿನ ಪರಿಸರದಲ್ಲಿ ಚಲನಚಿತ್ರಗಳ ಚಿತ್ರೀಕರಣ ಆಗಾಗ ನಡೆಯುತ್ತದೆ. ಕನ್ನಡ, ತೆಲುಗು, ತಮಿಳು, ಮಲಯಾಳಂ ಮಾತ್ರವಲ್ಲದೆ ಹಿಂದಿ ಮತ್ತು ಇಂಗ್ಲಿಷ್ ಸಿನಿಮಾಗಳೂ ಇಲ್ಲಿ ಚಿತ್ರೀಕರಣಗೊಂಡಿವೆ.

ಮಾರ್ಗ: ಎಡಮುರಿ ತಾಣ ಮಂಡ್ಯ ಜಿಲ್ಲೆಯಲ್ಲಿದ್ದರೂ ಮೈಸೂರು ನಗರಕ್ಕೆ ಹತ್ತಿರದಲ್ಲೇ ಇದೆ. ಜಿಲ್ಲಾ ಕೇಂದ್ರದಿಂದ 38 ಕಿ.ಮೀ, ಮೈಸೂರಿನಿಂದ 13 ಕಿ.ಮೀ ದೂರದಲ್ಲಿದೆ. ಮೈಸೂರಿನಿಂದ ಕೆಆರ್‌ಎಸ್‌ಗೆ ತೆರಳುವ ಮಾರ್ಗದಲ್ಲಿ ಬೆಳಗೊಳ ಬಳಿ ಬಲಕ್ಕೆ ತಿರುವು ಪಡೆದರೆ ಬೆಳಗೊಳದಿಂದ ಮೂರು ಕಿ.ಮೀ. ದೂರದಲ್ಲಿ ಬಲಮುರಿ ಸಿಗುತ್ತದೆ. ಅಲ್ಲಿಂದ ಎಡಕ್ಕೆ ಹೊರಳಿ ಎರಡು ಕಿ.ಮೀ. ಸಾಗಿದರೆ ಎಡಮುರಿ ತಲುಪಬಹುದು. ಉಳಿದುಕೊಳ್ಳಲು ಬಲಮುರಿ ಮತ್ತು ಬೆಳಗೊಳದಲ್ಲಿ ವಸತಿಗೃಹಗಳಿವೆ. ಕೆಆರ್‌ಎಸ್ ಅಥವಾ ಮೈಸೂರು ನಗರಗಳಲ್ಲೂ ತಂಗಬಹುದು. ●